ಯುವ ಮಾರ್ಗ
www.yuvamarga.com Yuva Marga yuva_marga_

# ಜೀವ ರಕ್ಷಣೆ ಪ್ರತಿಯೊಬ್ಬ ವ್ಯಕ್ತಿಯ ಜವಾಬ್ದಾರಿ: ಡಾ. ಸಂಗಮೇಶ ಶೇರಿ



**ಕಲಬುರಗಿ :ಫೆ.21:** ಜೀವ ಸಂರಕ್ಷಣೆಯ ಹೊಣೆಗಾರಿಕೆ ಪ್ರತಿಯೊಬ್ಬ ವ್ಯಕ್ತಿಯ ಜವಾಬ್ದಾರಿ. ಸಿಪಿಆರ್ ಮೂಲಕ ಅಪಾಯದ ಸನ್ನಿವೇಶಗಳಲ್ಲಿ ತುರ್ತು ಚಿಕಿತ್ಸೆ ಕಾಳಜಿ ಮತ್ತು ಹೊಣೆಗಾರಿಕೆ ಅತಿ ಅಗತ್ಯ ಎಂದು ರಾಷ್ಟ್ರ ಮಟ್ಟದ ಪ್ರಥಮ ಚಿಕಿತ್ಸಾ ತರಬೇತಿದಾರ ಡಾ. ಸಂಗಮೇಶ ಶೇರಿ ಹೇಳಿದರು.

ಗುಲಬರ್ಗಾ ವಿಶ್ವವಿದ್ಯಾಲಯದ ಪ್ರಾಣಿಶಾಸ್ತ್ರ ವಿಭಾಗ ಹಾಗೂ ಕಲಬುರಗಿ ಭಾರತೀಯ ರೆಡ್ ಕ್ರಾಸ್ ಸಂಸ್ಥೆ ಸಹಯೋಗದಲ್ಲಿ ಡಾರ್ವಿನ್ ಸಭಾಂಗಣದಲ್ಲಿ ಆಯೋಜಿಸಿದ "ಪ್ರಥಮ ಚಿಕಿತ್ಸಾ ತರಬೇತಿ" ಕಾರ್ಯಕ್ರಮವನ್ನು ಸಸಿಗೆ ನೀರು ಹಾಕುವ ಮೂಲಕ ಉದ್ಘಾಟಿಸಿ ಮಾತನಾಡಿ ಯಾವುದೇ ಅನಿರೀಕ್ಷಿತ ದುರ್ಘಟನೆ, ಅಪಘಾತ, ಉಸಿರಾಟ ತೊಂದರೆ, ಹೃದಯಘಾತ ಸಂಭವಿಸಿದ ಸನ್ನಿವೇಶಗಳಲ್ಲಿ ಸಂಕಷ್ಟದಲ್ಲಿರುವ ವ್ಯಕ್ತಿಗೆ ಜೀವ ಉಳಿಸಲು ತುರ್ತು ಸೇವೆ ಸಹಕಾರಿ ಮತ್ತು ಆಸ್ಪತ್ರೆಯವರೆಗೆ ಸುರಕ್ಷಿತವಾಗಿ ತಲುಪಿಸಲು ಮುಂಜಾಗ್ರತೆ ವಹಿಸಬೇಕು. ಮತ್ತೊಬ್ಬರ ಜೀವ ರಕ್ಷಣೆಗೆ ಸ್ಪಂದಿಸುವ ಮನೋಭಾವ ಅಳವಡಿಸಿಕೊಳ್ಳಬೇಕು ಎಂದ ಅವರು ಪ್ರಥಮ ಚಿಕಿತ್ಸಾ ವಿಧಾನಗಳನ್ನು ಪ್ರಾತ್ಯಕ್ಷಿಕೆ ಮೂಲಕ ವಿವರಿಸಿದರು.

ಪ್ರಾಣಿಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಪ್ರೊ. ಶಶಿಕಾಂತ ಮಜಗಿ ಪ್ರಾಸ್ತಾವಿಕವಾಗಿ ಮಾತನಾಡಿ ಸಮಾಜದೊಂದಿಗೆ ಬದುಕುವ ಯುವ ಜನಾಂಗ ಮಾನವೀಯತೆ ಬೆಳೆಸಿಕೊಂಡು ಅರೋಗ್ಯ ಕಾಳಜಿ, ಸೂಕ್ತ ಸಲಹೆ, ತುರ್ತು ಚಿಕಿತ್ಸೆಯ ಅರಿವಿನಿಂದ ಮತ್ತೊಬ್ಬರ ಜೀವ ಉಳಿಸಲು ಸಾಧ್ಯವಾಗುತ್ತದೆ ಎಂದ ಅವರು ತುರ್ತು ಪ್ರಥಮ ಚಿಕಿತ್ಸೆ ಮತ್ತು ಪ್ರಾಮುಖ್ಯತೆಯನ್ನು ವಿವರಿಸಿದರು. ಸಸ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಹಾಗೂ ಪ್ರಾಣಿಶಾಸ್ತ್ರ ವಿಭಾಗದ ಸಂಯೋಜಕ ಪ್ರೊ. ಜಿ.ಎಂ. ವಿದ್ಯಾಸಾಗರ ಅಧ್ಯಕ್ಷತೆ ವಹಿಸಿ ಮಾತನಾಡಿ ಆರೋಗ್ಯಕರ ಸಮಾಜ ನಿರ್ಮಿಸಲು ವಿದ್ಯಾರ್ಥಿಗಳು ಇಂತಹ ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಸದುಪಯೋಗಪಡಿಸಿ ಕೊಳ್ಳಬೇಕು. ಪ್ರಾಥಮಿಕ ತುರ್ತು ಚಿಕಿತ್ಸೆಯ ಜ್ಞಾನ ಮತ್ತು ಅನುಭವದಿಂದ ಮತ್ತೊಬ್ಬರ ಸಹಾಯಕ್ಕೆ ಸ್ಪಂದಿಸಲು ಸಾಧ್ಯವಾಗಲಿದೆ ಎಂದರು.

ಕಾರ್ಯಕ್ರಮದಲ್ಲಿ ಪ್ರಾಣಿಶಾಸ್ತ್ರ ವಿಭಾಗದ ಪ್ರಾಧ್ಯಾಪಕ ಡಾ. ವಿಜಯಕುಮಾರ ಮಲಶೆಟ್ಟಿ, ರೆಡ್ ಕ್ರಾಸ್ ಆಡಳಿತ ಮಂಡಳಿಯ ಸದಸ್ಯ ಡಾ. ಸನಾವುಲ್ಲಾ, ಅತಿಥಿ ಉಪನ್ಯಾಸಕರಾದ ಡಾ. ಸಂಧ್ಯಾ ದಿವಾಕರ ಮೂಲಭಾರತಿ, ಡಾ. ಶರಣಬಸಪ್ಪ ಪಾಟೀಲ, ಡಾ. ಖಸೀಮ ಫಾತಿಮಾ ಉಪಸ್ಥಿತರಿದ್ದರು. ಪ್ರಾಣಿಶಾಸ್ತ್ರ ವಿಭಾಗದ ಅತಿಥಿ ಉಪನ್ಯಾಸಕರು, ಸಂಶೋಧನಾ ಹಾಗೂ ಸ್ನಾತಕೋತ್ತರ ವಿದ್ಯಾರ್ಥಿಗಳು ಭಾಗವಹಿಸಿದ್ದರು. ಕು. ಸ್ನೇಹಾ ಸಂಗಡಿಗರು ಪ್ರಾರ್ಥಿಸಿದರು. ಕು. ಪ್ರಿಯಾಂಕ ಸ್ವಾಗತಿಸಿದರು. ಕು. ಮಹೀನ್ ವಂದಿಸಿದರು, ಕು. ಶಗುಪ್ತಾ ಕಾರ್ಯಕ್ರಮ ನಿರ್ವಹಿಸಿದರು.

# ವಿಧ್ವಂಸಕ ಕೃತ್ಯಕ್ಕೆ ಎಲ್‌ಇಟಿ ಸಂಚು: ದೆಹಲಿಯಲ್ಲಿ ಕಟ್ಟೆಚ್ಚರ

**ನವದೆಹಲಿ,ಫೆ.21–** ಹಳೆಯ ದೆಹಲಿಯಲ್ಲಿ ಜನದಟ್ಟಣೆಯ ಧಾರ್ಮಿಕ ಮತ್ತು ಕೆಂಪುಕೋಟೆ, ಚಾಂದಿನಿ ಚೌಕ್ ಸೇರಿದಂತೆ ಪರಂಪರೆಯ ಸ್ಥಳಗಳನ್ನು ಗುರಿಯಾಗಿಸಿಕೊಂಡು ಪಾಕಿಸ್ತಾನ ಮೂಲದ ಸಂಘಟನೆ ಲಷ್ಕರ್–ಎ–ತೈಬಾ –ಎಲ್‌ಇಟಿ ಸಂಭಾವ್ಯ ಭಯೋತ್ಪಾದಕ ಸಂಚು ರೂಪಿಸಿದೆ ಎನ್ನುವ ಸಂಗತಿಯನ್ನು ಗುಪ್ತಚರ ಮೂಲಗಳು ಬಹಿರಂಗ ಪಡಿಸಿದ ಹಿನ್ನೆಲೆಯಲ್ಲಿ ರಾಷ್ಟ್ರ ರಾಜಧಾನಿಯಲ್ಲಿ ವ್ಯಾಪಕ ಕಟ್ಟೆಚ್ಚರ ವಹಿಸಲಾಗಿದೆ.

ಲಷ್ಕರ್–ಎ–ತೈಬಾ –ಎಲ್‌ಇಟಿ ದಾಳಿ ನಡೆಸುವ ಸಾಧ್ಯತೆ ಇದೆ ಗುಪ್ತಚರ ಮಾಹಿತಿಯ ನಂತರ ಭದ್ರತಾ ಸಂಸ್ಥೆಗಳು ರಾಷ್ಟ್ರ ರಾಜಧಾನಿಯಲ್ಲಿ ಬಿಗಿ ಭದ್ರತೆ ಹೆಚ್ಚಿಸಿದ್ದಾರೆ. ಧಾರ್ಮಿಕ ಮತ್ತು ಪಾರಂಪರಿಕ ತಾಣಗಳಲ್ಲಿ ಭದ್ರತೆಯನ್ನು ಮತ್ತಷ್ಟು ಬಿಗಿಗೊಳಿಸಲಾಗಿದೆರಾಜಧಾನಿಯ ಸೂಕ್ಷ್ಮ ಸ್ಥಳಗಳಲ್ಲಿ ಮತ್ತಷ್ಟು ಭದ್ರತೆ ಬಿಗಿಗೊಳಿಸಲಾಗಿದ್ದು, ಯಾವುದೇ ಸಂಭಾವ್ಯ ಭಯೋತ್ಪಾದಕ ದಾಳಿಯನ್ನು ತಡೆಗಟ್ಟಲು ಹೆಚ್ಚಿನ ಕಣ್ಗಾವಲು, ವಾಹನ ತಪಾಸಣೆ ಮತ್ತು ವಿಧ್ವಂಸಕ ವಿರೋಧಿ ಕಾರ್ಯಾಚರಣೆಗಳು ನಡೆಯುತ್ತಿವೆ.


ಕೆಂಪು ಕೋಟೆಯ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಮತ್ತು ಜನನಿಬಿಡ ಚಾಂದನಿ ಚೌಕ್ ಪ್ರದೇಶದಲ್ಲಿ ನೆಲೆಗೊಂಡಿರುವ ದೇವಾಲಯಗಳಲ್ಲಿ ಭಯೋತ್ಪಾದಕರು ಸುಧಾರಿತ ಸ್ಫೋಟಕ ಸಾಧನ ದಾಳಿಗೆ ಪ್ರಯತ್ನಿಸಬಹುದು ಎಂದು ಗುಪ್ತಚರ ಮೂಲಗಳು ತಿಳಿಸಿವೆ

ಪಾಕಿಸ್ತಾನ ಮೂಲದ ಸಂಘಟನೆ ಲಷ್ಕರ್–ಎ–ತೈಬಾ –ಎಲ್‌ಇಟಿ ಶಂಕಿತರು ಫೆಬ್ರವರಿ 6 ರಂದು ಇಸ್ಲಾಮಾಬಾದ್‌ನ ಮಸೀದಿಯಲ್ಲಿ ಇತ್ತೀಚೆಗೆ ನಡೆದ ಸ್ಫೋಟದ ನಂತರ ಪ್ರತೀಕಾರದ ಪ್ರಯತ್ನಕ್ಕೆ ಸಂಬಂಧಿಸಿದೆ, ಎಲ್‌ಇಟಿ ಕಾರ್ಯಕರ್ತರು ಭಾರತದಲ್ಲಿ ಪ್ರಮುಖ ದಾಳಿ ನಡೆಸಲು ಪ್ರಯತ್ನಿಸುತ್ತಿದ್ದಾರೆ ಎಂದು ಹೇಳಲಾಗಿದೆ.

ದೇಶಾದ್ಯಂತ ಪ್ರಮುಖ ದೇವಾಲಯಗಳು ಸಂಭಾವ್ಯ ಗುರಿಗಳಾಗಿ ಉಳಿಯಬಹುದು ಎಂದು ಗುಪ್ತಚರ ಸಂಸ್ಥೆಗಳು ಎಚ್ಚರಿಸಿವೆ. ಮಾಹಿತಿಯ ನಂತರ, ದೆಹಲಿ ಪೊಲೀಸರು ಮತ್ತು ಕೇಂದ್ರ ಭದ್ರತಾ ಸಂಸ್ಥೆಗಳು ಸೂಕ್ಷ್ಮ ವಲಯಗಳಲ್ಲಿ, ವಿಶೇಷವಾಗಿ ಹಳೆಯ ದೆಹಲಿಯಲ್ಲಿ ಕಣ್ಗಾವಲು ತೀವ್ರಗೊಳಿಸಿವೆ.

ಜನನಿಬಿಡ ಸ್ಥಳದದಲ್ಲಿ ಭದ್ರತೆ ಹೆಚ್ಚುವರಿ ಸಿಬ್ಬಂದಿ ನಿಯೋಜಿಸಲಾಗಿದೆ, ವಾಹನ ತಪಾಸಣೆಗಳನ್ನು ಹೆಚ್ಚಿಸಲಾಗಿದೆ ಮತ್ತು ಧಾರ್ಮಿಕ ಸ್ಥಳಗಳು ಮತ್ತು ಪ್ರವಾಸಿ ಕೇಂದ್ರಗಳ ಬಳಿ ವಿಧ್ವಂಸಕ ಕೃತ್ಯಗಳ ವಿರುದ್ಧ ತಪಾಸಣೆಗಳನ್ನು ಪ್ರಾರಂಭಿಸಲಾಗಿದೆ ಎಂದು ಭದ್ರತಾ ಮೂಲಗಳು ಮಾಹಿತಿ ಹಂಚಿಕೊಂಡಿವೆ.

ದೆಹಲಿಯಲ್ಲಿ ಪಾಕಿಸ್ತಾನ ಮೂಲದ ಸಂಘಟನೆ ಲಷ್ಕರ್–ಎ–ತೈಬಾ –ಎಲ್‌ಇಟಿ ದಾಳಿ ಸಾಧ್ಯತೆ



ಕೆಂಪುಕೋಟೆ ಸೇರಿದಂತೆ ಜನನಿಬಿಡ ಸ್ಥಳಗಳಲ್ಲಿ ಬಿಗಿಭದ್ರತೆ

ಕಣ್ಗಾವಲು ಹೆಚ್ಚಿಸಿದ ಭದ್ರತಾ ಪಡೆಗಳು, ಹೆಚ್ಚಿನ ಪೊಲೀಸರ ನಿಯೋಜನೆ

ಪ್ರಮುಖ ದೇವಾಲಯಗಳ ಮೇಲೆ ಹೆಚ್ಚಿನ ನಿಗಾ

ಪ್ರವಾಸಿ ತಾಣಗಳಲ್ಲಿ ಬಾರಿ ಕಣ್ಗಾವಲು

ಧಾರ್ಮಿಕ ಸ್ಥಳದಲ್ಲಿ ಹೆಚ್ಚಿನ ಭದ್ರತಾ ಸಿಬ್ಬಂದಿ ನಿಯೋಜನೆ

ಕೆಂಪು ಕೋಟೆ ಸ್ಫೋಟ 12 ಜನರು ಸಾವು–2025 ರ ನವೆಂಬರ್ 10 ರಂದು ದೆಹಲಿಯ ಐತಿಹಾಸಿಕ ಕೆಂಪು ಕೋಟೆಯ ಬಳಿ ಸಂಭವಿಸಿದ ಮಾರಕ ಕಾರು ಸ್ಫೋಟದಲ್ಲಿ 12 ಜನರು ಸಾವನ್ನಪ್ಪಿ, ಸುಮಾರು 24 ಜನರು ಗಾಯಗೊಂಡ ಮೂರು ತಿಂಗಳ ನಂತರ ಭಯೋತ್ಪಾದಕ ಎಚ್ಚರಿಕೆ ಬಂದಿದೆ.

ಕೆಂಪು ಕೋಟೆ ಮೆಟ್ರೋ ನಿಲ್ದಾಣದ ಬಳಿ ಸ್ಫೋಟ ಸಂಭವಿಸಿದಾಗ ಸ್ಫೋಟಕಗಳನ್ನು ತುಂಬಿದ್ದ ಕಾರು ಸ್ಫೋಟಗೊಂಡು ಹತ್ತಿರದ ಹಲವಾರು ವಾಹನಗಳನ್ನು ಸ್ಫೋಟಿಸಲಾಗಿತ್ತು

ಡಿಎನ್‌ಎ ಪರೀಕ್ಷಾ ಫಲಿತಾಂಶಗಳ ಪ್ರಕಾರ, ಫರಿದಾಬಾದ್‌ನ ಅಲ್ ಫಲಾಹ್ ವಿಶ್ವವಿದ್ಯಾಲಯದ ವೈದ್ಯ ಉಮರ್ ಉನ್ ನಬಿ ಎಂದೂ ಕರೆಯಲ್ಪಡುವ ಉಮರ್ ಮೊಹಮ್ಮದ್ ಅವರು ವಾಹನವನ್ನು ಚಲಾಯಿಸುತ್ತಿದ್ದರು. ಅದೇ ದಿನ, ಅಮೋನಿಯಂ ನೈಟ್ರೇಟ್ ಸೇರಿದಂತೆ 2,900 ಕೆಜಿ ಸ್ಫೋಟಕಗಳನ್ನು ರಾಷ್ಟ್ರೀಯ ರಾಜಧಾನಿಯಿಂದ ಸುಮಾರು 50 ಕಿ.ಮೀ ದೂರದಲ್ಲಿ ಹರಿಯಾಣದ ಫರಿದಾಬಾದ್‌ನಲ್ಲಿ ವಶಪಡಿಸಿಕೊಳ್ಳಲಾಗಿತ್ತು.

ಪ್ರಮುಖ ಸದಸ್ಯರಾದ ಡಾ. ಮುಜಮ್ಮಿಲ್ ಶಕೀಲ್ ಮತ್ತು ಡಾ. ಆದಿಲ್ ರಾಥರ್ ಅವರನ್ನು ಬಂಧಿಸಿ ಸ್ಫೋಟಕಗಳ ಸಂಗ್ರಹವನ್ನು ವಶಪಡಿಸಿಕೊಂಡ ನಂತರ ಉಮರ್ ಮೊಹಮ್ಮದ್ ಭಯಭೀತರಾಗಿ ಕೆಂಪು ಕೋಟೆಯ ಬಳಿ ಸ್ಫೋಟವನ್ನು ಪ್ರಚೋದಿಸಿದರು ಎಂದು ಆರೋಪಿಸಲಾಗಿದೆ.

# ದಿನದಿಂದ ದಿನಕ್ಕೆ ಕಲುಷಿತ ಗೊಳ್ಳುತ್ತಿರುವ ಕೃಷ್ಣಾ

**ಜಮಖಂಡಿ:ಫೆ.21:**ಕೃಷ್ಣಾ ನದಿಯು ಜೀವ ಜಲ ಉತ್ತರ ಕರ್ನಾಟಕದ ಐದು ಜಿಲ್ಲೆಯ ಸಹಿತ ಮೂರು ರಾಜ್ಯಗಳ ರೈತರಿಗೆ ವರದಾನವಾದರೆ ಇಂದು ಚರಂಡಿ ನೀರಿನಿಂದ ಕಲುಶಿತಗೊಂಡು ಶಾಪಯುಕ್ತವಾಗಿದೆ.

ಕೊಳಚೆ ನೀರು, ಕಾರ್ಖಾನೆಗಳ ತ್ಯಾಜ್ಯ, ಕಟ್ಟಡಗಳ ತ್ಯಾಜ್ಯ, ರಾಶಿ, ರಾಶಿ ಭಕ್ತರ ಬಟ್ಟೆಗಳು ನದಿ ನೀರನ್ನು ಕಲುಷಿತಗೊಳಿ ಸುತ್ತವೆ. ಅದೇ ನೀರನ್ನು ನದಿ ತೀರದ ನೂರಾರು ನಗರ, ಪಟ್ಟಣ, ಗ್ರಾಮಗಳ ಕುಡಿಯುವ ನೀರಿನ ಮೂಲವಾಗಿದೆ.

ಬೇಸಿಗೆ ಆರಂಭವಾಗುತ್ತಿದ್ದಂತೆ ಕೃಷ್ಣೆಯ ಪಾತ್ರದಲ್ಲಿ ನೀರಿನ ಹರಿವು ಕಡಿಮೆಯಗುತ್ತದೆ ವರ್ಷದಲ್ಲಿ ಆರು ತಿಂಗಳು ಮಾತ್ರ ನೀರಿನ ಹರಿವಿದ್ದರೆ ಇನ್ನುಳಿದ ಆರು ತಿಂಗಳು ಹಿನ್ನೀರಿನಿಂದ ನಿಂತು ಮಲಿನವಾಗುವ ಸಾಧ್ಯತೆ ಹೆಚ್ಚಾಗಿರುತ್ತದೆ. ಇಂತಹದೇ ನೀರನ್ನು ಸೇವಿಸುವ ಜನಜಾನುವಾರುಗಳ ಹಾಗೂ ಜನರ ಸ್ಥಿತಿ ಏನಗಬಾರದು ಆರೋಗ್ಯದ ಮೇಲೆ ದುಷ್ಪರಿಣಾಮ ಬೀರುವದಂತೂ ಗ್ಯಾರಂಟೀ ಯೋಜನೆಯಾಗಿದೆ.

ಅವಳಿ ತಾಲೂಕಿನ ಅನೇಕ ಗ್ರಾಮ ಮತ್ತು ನಗರ ಸೇರಿದಂತೆ ಸಕ್ಕರೆ ಕಾರ್ಖಾನೆಗಳ ಕಲುಶಿತ ನೀರು ಯಾವುದೆ ಸಂಸ್ಕರಣ ವಿಲ್ಲದೇ ನೇರವಾಗಿ ನದಿಗೆ ಸೇರುತ್ತದೆ. ಇಂತಹ ಕಲುಶಿತ ನೀರು ಭೂಮಿಗೆ ಬಿಡುವದರಿಂದ ಭುಮಿಯ ಫಲವತ್ತತೆಯೂ ಕಡಿಮೆಯಾಗಿ ಇಳುವರಿಯೂ ಸಹ ಕುಂಠಿತವಾಗುತ್ತದೆ. ಇಂತಹ ನೀರು ಬಳಸಿ ಬೆಳೆದ ಬೆಳೆಯನ್ನು ಸೇವಿಸಿದ ಜನರಿಗೆ ರೋಗಳನ್ನು



ಆವ್ಹಾನಿಸಿದಂತಾಗುತ್ತವೆ.

ಒಂದೆಡೆ ಏರುತ್ತಿರುವ ತಾಪಮಾನದಿಂದ ಕಲುಶಿತ ನೀರು ಸೇವಿಸದರೆ ಅಪಾಯ ಕಟ್ಟಿಟ್ಟ ಬುತ್ತಿ ಎಂದು ನದೀ ತೀರದ ಗ್ರಾಮಗಳ ಮತ್ತು ನದಿಯ ನೀರನ್ನೇ ನಂಬಿದ ನಗರವಾಸಿಗಳ ಚಿಂತೆಯಾಗಿದೆ.

ನದೀ ತೀರದ ಗ್ರಾಮಗಳು, ಮತ್ತು ನಗರಗಳು ತಮ್ಮ ಚರಂಡಿ ನೀರನ್ನು ನೇರವಾಗಿ ನದಿಗೆ ಬಿಡದೇ ಶುದ್ದೀಕರಿಸಿ ಬಿಡಬೇಕಾಗುತ್ತಿದೆ ಆದರೆ ಇದು ಈಗ ನಡೆಯುತ್ತಿಲ್ಲ ಹೇಗೆ ಬರುತ್ತದೆಯೋ ಹಾಗೇಯೇ ನದಿಗೆ ಸೇರುತ್ತದೆ, ಕೊಳಚೆ ನೀರು ನದಿಗೆ ನೇರವಾಗಿ ಸೇರದಂತೆ ಪ್ರತಿಯೊಂದ ಹಂತದಲ್ಲಿ ಶುದ್ದೀಕರಣ ಘಟಕ ಅಳವಡಿಸುವದು ಅನಿವಾರ್ಯವಾಗಿದೆ.

ಇಂತಹ ಕಲುಶಿತ ನೀರನ್ನು ಸೇವಿಸುವದರಿಂದ ಅನೇಕ ನದೀ ತೀರ ಮತ್ತು ನದಿಯ ನೀರನ್ನೇ ಅವಲಂಬಿಸಿದ ನಗರ ಪ್ರದೇಶದವರಿಗೆ ಕ್ಯಾನ್ಸರ್, ಟಿಬಿ, ಥೈರಾಡದಂತಹ ಮಾರಕರೋ ಗಳಿಗೆ ತುತ್ತಾಗುತ್ತಿದ್ದಾರೆ. ಅದಕ್ಕಾಗಿ ಸ್ಥಳೀಯ ಸಂಸ್ಥೆಗಳು ಕಾರ್ಖಾನೆಗಳು,ನೀರು ಸಂಸ್ಕರಣಾ ಘಟಕಗಳನ್ನು ಸ್ಥಾಪಿಸಬೇಕು. ಸಂಸ್ಕರಿಸಿದ ನೀರನ್ನೇ ಹೊರಬಿಡುವ ಹಾಗೆ ಕಟ್ಟನಿಟ್ಟಿನ ಕ್ರಮ ಜರುಗಿಸುವದು ಅನಿವಾರ್ಯವಾಗಿದೆ. ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿಯೂ ಸಹ ಇದಕ್ಕೆ ಹೊರತಾಗಿಲ್ಲ ಒಮ್ಮೆಯಾದರೂ ಸಹ ನದೀ ತೀರದಲ್ಲಿ ಬಂದು ಸರ್ವೇಮಾಡಿದ್ದು ನಾವು ನೋಡಿಲ್ಲ ಎಂದು ಗ್ರಾಮಸ್ಥರು ಹೇಳುತ್ತಾರೆ.

ತಾಲೂಕಾ ಪಂಚಾಯತಿ ಕಾರ್ಯನಿರ್ವಾಹಕ ಅಧಿಕಾರಿ ಸಚಿನ ಮಾಚಕನೂರ; ಕಾರ್ಖಾನೆಗಳ ಕೊಳಚೆ ನೀರು ಸಂಸ್ಕರಿಸುವ ಬಗ್ಗೆ ಜಲ ಮಾಲಿನ್ಯ ನಿರ್ವಹಣಾ ಮಂಡಲಿಯು ನಿಗಾ ವಹಿಸುತ್ತದೆ. ಇನ್ನು ಗ್ರಾಮ ಪಂಚಾಯತಿಗಳಿಂದ ಹೋಗುವ ಚರಂಡಿ ನೀರಿಗಾಗಿ ಬೂದು ನೀರು ನಿರ್ವಹಣೆ ಯೋಜನೆ ಪ್ರಾರಂಭವಾಗಿದ್ದು ಮೊದಲನೇ ಹಂತದಲ್ಲಿ 2 ಗ್ರಾಮ ಪಂಚಾಯತಿ ಕಾರ್ಯಗತವಾಗಿದ್ದು ಶೇ 30 ರಷ್ಟು ಕಾಮಗರಿಯು ಮುಗಿದಿದೆ ಇನ್ನು ಎರಡನೇ ಹಂತದಲ್ಲಿ ಮತ್ತೇರಡು ಗ್ರಾಮ ಪಮಚಾಯತಿಗಾಗಿ ಕ್ರೀಯ ಯೋಜನೆ ಮಾಡಲಾಗಿದೆ ಈ ಯೋಜನೆಯು ಅತೀ ಹೆಚ್ಚು ವೆಚ್ಚದ್ದಾಗಿದ್ದರಿಂದ ವರ್ಷಕ್ಕೆರಡು ಗ್ರಾಮಗಳನ್ನು ಆರಿಸಿಕೊಳ್ಳುತ್ತೇವೆ ಎಂದು ಹೇಳಿದರು.

ತಾಲೂಕಾ ಆರೋಗ್ಯಧಿಕಾರಿ ಡಾ ಗೈಬುಸಾಬ ಗಲಗಲಿ 

ನದಿ ಮತ್ತು ಕೊಳಬೇ ಬಾವಿಗಳ ನೀರನು ಪರೀಕ್ಷಿಸಿ ಸಂಬಂಧಪಟ್ಟ ಇಲಾಕೆಗೆ ವರದಿಯನ್ನು ನೀಡುತ್ತೇವೆ. ಆದರೆ ನಮ್ಮಿಂದ ಯಾವುದೆ ಸಂಸ್ಕರಣಾ ಘಟಕದ ವ್ಯವಸ್ಥೆಯು ಇರುವದಿಲ್ಲ ಅದಕ್ಕೆ ನಗರ ಸಭೆ ಮತ್ತು ಗ್ರಾಮ ಪಮಚಾಯತಿವರೆ ಮಾಡಬೇಕಿರುತ್ತದೆ ಎಂದು ಹೇಳಿದರು.

# ನಾಯ್ಕಲ್–ನಾಲ್ವಡಗಿ ಸೇತುವೆಗಳ ದುಸ್ಥಿತಿ ವಿರುದ್ಧ ಮೀನು ಬಲೆ ಬಿಸಿ ತೀವ್ರ ಪ್ರತಿಭಟನೆ

**ಯಾದಗಿರಿ:ಫೆ.21:**ಜಿಲ್ಲೆಯ ವಡಗೇರಾ ತಾಲ್ಲೂಕಿನ ನಾಯ್ಕಲ್–ನಾಲ್ವಡಗಿ ಸಂಪರ್ಕ ಸೇತುವೆಗಳ ದುಸ್ಥಿತಿಗೆ ಆಕ್ರೋಶ ವ್ಯಕ್ತಪಡಿಸಿ ಸಾಮಾಜಿಕ ಹೋರಾಟಗಾರ ಉಮೇಶ್ ಕೆ. ಮುದ್ನಾಳ್ ನೇತೃತ್ವದಲ್ಲಿ ಗ್ರಾಮಸ್ಥರು ಮತ್ತು ರೈತರು ಮೀನು ಬಲೆ ಬೀಸಿ ವಿನೂತನವಾದರೂ ತೀವ್ರ ಸಂದೇಶದ ಪ್ರತಿಭಟನೆ ನಡೆಸಿದರು.

ಸೇತುವೆ ಮೇಲೆಯೇ ನಿಂತು ಮೀನು ಬಲೆ ಬೀಸುವ ಮೂಲಕ "ಪ್ರತಿ ವರ್ಷ ಮಳೆಗೆ ಸೇತುವೆ ಜಲಾವೃತವಾಗುವ ಸ್ಥಿತಿ ಬದಲಾ ಯಿಸಬೇಕು" ಎಂಬ ಘೋಷಣೆ ಕೂಗಿದ ಪ್ರತಿಭಟನಾಕಾರರು, ಸರ್ಕಾರ ಹಾಗೂ ಜಿಲ್ಲಾಡಳಿತದ ನಿರ್ಲಕ್ಷ್ಯವನ್ನು ಖಂಡಿಸಿದರು.

**ವರ್ಷಗಳಿಂದ ನಿರ್ಲಕ್ಷ್ಯ ಜೀವದ ಜೊತೆ ಜೂಜಾಟ–** ಹತ್ತಾರು ಹಳ್ಳಿಗಳಿಗೆ ಜೀವನಾಡಿಯಾಗಿರುವ ಈ ಸೇತುವೆಗಳು ಹಲವು ವರ್ಷಗಳ ಹಿಂದೆ ನಿರ್ಮಾಣಗೊಂಡಿದ್ದರೂ ಇಂದಿಗೂ ಮೇಲ್ದರ್ಜೆಗೆ ಏರಿಸದೇ ಇರುವುದು ಜನರ ಜೀವದ ಜೊತೆ ಜೂಜಾಟವಾಡಿದಂತಾಗಿದೆ ಎಂದು ಉಮೇಶ್ ಕೆ. ಮುದ್ನಾಳ್ ಕಿಡಿಕಾರಿದರು.ಪ್ರತಿ ವರ್ಷ ಮಳೆ ಹೆಚ್ಚಾದಾಗ ಸೇತುವೆಗಳು



ಜಲಾವೃತಗೊಂಡು ಸಂಚಾರ ಸಂಪೂರ್ಣ ಸ್ಥಗಿತಗೊಳ್ಳುತ್ತದೆ. ರೈತರು ತಮ್ಮ ಹೊಲಗಳಿಗೆ ತೆರಳಲು ಸಾಧ್ಯವಾಗದೆ ತೊಂದರೆ ಅನುಭವಿಸುತ್ತಾರೆ. ವಿದ್ಯಾರ್ಥಿಗಳು, ಮಹಿಳೆಯರು ಹಾಗೂ ವೃದ್ಧರು ಅಪಾಯದ ನಡುವೆ ಸಂಚರಿಸಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. ಈ ಸೇತುವೆ ಮಾರ್ಗದಲ್ಲಿ ದಿನನಿತ್ಯ ಟ್ರ್ಯಾಕ್ಟರ್‌ಗಳು, ಎತ್ತಿನಬಂಡಿಗಳು, ಟಂಟಂ ವಾಹನಗಳು ಹಾಗೂ ದನ–ಕರುಗಳು ಸಂಚರಿಸುತ್ತಿವೆ. ಎರಡೂ ಬದಿಗಳಲ್ಲಿ ಭದ್ರತಾ ತಡೆಗೋಡೆ ಇಲ್ಲದಿರುವುದರಿಂದ ಅಪಘಾತ ಸಂಭವಿಸುವ ಭೀತಿ ಹೆಚ್ಚಾಗಿದೆ. ವಿಶೇಷವಾಗಿ ರಾತ್ರಿ ವೇಳೆ ಹೊಸಬರು ಸಂಚರಿಸಿದರೆ ಭೀಕರ ಅನಾಹುತ ಸಂಭವಿಸುವ ಸಾಧ್ಯತೆ ಇದೆ ಎಂದು ಹೋರಾಟಗಾರರು ಎಚ್ಚರಿಸಿದರು.ಸಂಬಂಧಪಟ್ಟ ಅಧಿಕಾರಿಗಳ ನಿರ್ಲಕ್ಷ್ಯವೇ ಸೇತುವೆಗಳ ದುಸ್ಥಿತಿಗೆ ಕಾರಣ ಎಂದು ಆರೋಪಿಸಿದ ಅವರು, ತಕ್ಷಣವೇ ಸೇತುವೆಗಳನ್ನು ಮೇಲ್ದರ್ಜೆಗೆ ಏರಿಸಿ, ಬಲಿಷ್ಠ ತಡೆಗೋಡೆ ನಿರ್ಮಿಸಬೇಕು ಎಂದು ಒತ್ತಾಯಿಸಿದರು.ಕೂಡಲೇ ಕ್ರಮ ಕೈಗೊಳ್ಳದಿದ್ದರೆ ಯಾದಗಿರಿ–ಶಹಾಪೂರ ರಸ್ತೆ ತಡೆದು ರೈತರು ಮತ್ತು ಗ್ರಾಮಸ್ಥರೊಂದಿಗೆ ತೀವ್ರ ಹೋರಾಟ ನಡೆಸುವುದಾಗಿ ಉಮೇಶ್ ಕೆ. ಮುದ್ನಾಳ್ ಎಚ್ಚರಿಸಿದರು. ಭವಿಷ್ಯದಲ್ಲಿ ಈ ರಸ್ತೆಯಲ್ಲಿ ಯಾವುದೇ ಅನಾಹುತ ಸಂಭವಿಸಿದರೆ ಅದರ ಸಂಪೂರ್ಣ ಹೊಣೆ ಸಂಬಂಧಪಟ್ಟ ಅಧಿಕಾರಿಗಳದ್ದೇ ಆಗಿರುತ್ತದೆ. ಅಗತ್ಯವಿದ್ದಲ್ಲಿ ವಡಗೇರಾ ಗ್ರಾಮೀಣ ಪೊಲೀಸ್ ಠಾಣೆ ಯಲ್ಲಿ ಪ್ರಕರಣ ದಾಖಲಿಸುವುದಾಗಿ ಅವರು ತಿಳಿಸಿದರು. ಪ್ರತಿಭಟನೆಯಲ್ಲಿ ಖಾಜಾಮೈನುದ್ದೀನ್, ಪವನ, ಭೀಮರಾಯ, ಮಲ್ಲಿಕಾರ್ಜುನರೆಡ್ಡಿ, ಶಬ್ಬೀರ್, ಮೌಲಾಸಾಬ್, ಶಿವರಾಜ್, ಮಹಮ್ಮದ್ ಸದರಿ, ಸಿದ್ದಲಿಂಗಪ್ಪ, ಅಜೀರ್‌ಸಾಬ್, ಬಾಷುಮಿಯಾ, ಮಹಮ್ಮದ್ ಜಾನಿ, ಖಾಜಾಸಾಬ್, ಗುಲಾಮ್, ವರ್ಕೂರ್, ಮಶಾಕ್, ಮೌನೇಶ್, ನಬಿಚಂದ್, ಸಿರಾಜ್, ಖಾಸಿಂಸಾಬ್, ಮಲ್ಲಪ್ಪ, ಈಶಪ್ಪ, ಸಾಬಣ್ಣ, ಶರಣಪ್ಪ, ಶಿವಣ್ಣ, ತೋಟಪ್ಪ, ಸಿದ್ದಣ್ಣ, ಮಜಂಪ್ಪ, ಪರಮಣ್ಣ, ಲಕ್ಷ್ಮಣ್ ಸೇರಿದಂತೆ ಅನೇಕರು ಉಪಸ್ಥಿತರಿದ್ದರು.

